ಧರ್ಮಸ್ಥಳದಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಬಗ್ಗೆ

೪೦೬೫ ಶ್ರೀ ವಸಂತ ಬಂಗೇರಾ (ಬೆಳ್ತಂಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರೀ ಕ್ಷೇತ್ರ ಧರ್ಮಸ್ಥಳದ ವತಿಯಿಂದ ಧರ್ಮಾಧಿಕಾರಿಗಳು ಬೆಳ್ತಂಗಡಿ ತಾಲ್ಲೂಕಿನ ೮೧ ಗ್ರಾಮಗಳನ್ನು ದತ್ತು ಸ್ವೀಕಾರ ಮಾಡಿ ಗ್ರಾಮಾಭಿವೃದ್ಧಿ ಯೋಜನೆಯನ್ನು ಹಮ್ಮಿಕೊಂಡಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ ?

ಆ) ಧರ್ಮಾಧಿಕಾರಿಯವರು ಹಮ್ಮಿಕೊಂಡ ಗ್ರಾಮಾಭಿವೃದ್ಧಿ ಯೋಜನೆಯು ಸರಕಾರದ ಯೋಜನೆಗಳಿಗಿಂತ ಉತ್ತಮ ರೀತಿಯಲ್ಲಿ ಫಲಪ್ರದವಾಗಿದೆ ಎಂಬ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ ?

ಇ) ರಾಜ್ಯದಲ್ಲಿ ಈ ರೀತಿಯ ಯೋಜನೆಗಳನ್ನು ಹಮ್ಮಿಕೊಂಡಿರುವ ಧರ್ಮ ಸಂಸ್ಥೆಗಳು ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಬಂದಿರುತ್ತದೆ.

ಆ) ಧರ್ಮಾಧಿಕಾರಿಯವರು ಗ್ರಾಮಾಭಿವೃದ್ಧಿ ಯೋಜನೆಯನ್ನು ಅವರದೇ ಆದ ರೀತಿಯಲ್ಲಿ ಅನುಷ್ಠಾನಗೊಳಿಸುತ್ತಿರುವುದರಿಂದ ಸರ್ಕಾರದ ಯೋಜನೆಗಿಂತ ಉತ್ತಮ ರೀತಿಯಲ್ಲಿ ಫಲಪ್ರದವಾಗಿದೆ ಎಂಬ ವಿಚಾರ ಸರಿಯಲ್ಲ.

ಇ) ಅಂತಹ ಸಂಸ್ಥೆಗಳು ಸರಕಾರದ ಗಮನಕ್ಕೆ ಬಂದಿರುವುದಿಲ್ಲ.

ವಿಶ್ವಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿದ ಅಧಿಕಾರಿಗಳ ಬಗ್ಗೆ

೪೦೫೫ ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೮ರ ಆಗಸ್ಟ್ ತಿಂಗಳಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿದ ಮಂತ್ರಿಗಳ ಸಂಖ್ಯೆ.

ಆ) ಈ ಸಮ್ಮೇಳನದಲ್ಲಿ ಭಾಗವಹಿಸಿದ ಅಧಿಕಾರಿಗಳ ಸಂಖ್ಯೆ ಅವರ ಪದನಾಮ ಹಾಗೂ ಅವರ ಅವಶ್ಯಕತೆ.

ಶ್ರೀ ಎಂ. ಪಿ. ಪ್ರಕಾಶ್, (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಮಾನ್ಯ ಮುಖ್ಯಮಂತ್ರಿಗಳೂ ಸೇರಿದಂತೆ ಮೂವರು ಸಚಿವರುಗಳು.

ಆ) ನಾಲ್ವರು ಅಧಿಕಾರಿಗಳು, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ಉಪನಿರ್ದೇಶಕರು ಮತ್ತು ಒಬ್ಬ ಹಿರಿಯ ಕಲಾಕಾರರು ವಸ್ತು ಪ್ರದರ್ಶನ ಏರ್ಪಾಡಿಗಾಗಿ ಮತ್ತು ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರು ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುವುದಕ್ಕಾಗಿ, ಇವರುಗಳ ಸೇವೆಯು ಅವಶ್ಯವಾಗಿತ್ತು.

ಕ) ಸಮ್ಮೇಳನದಲ್ಲಿ ಭಾಗವಹಿಸಿದ್ದ ಕಲಾವಿದರು ಮತ್ತಿತರರು ವರ್ಗವಾರು ಸ್ತ್ರೀ ಹಾಗೂ ಪುರುಷರು)

ವರ್ಗ	ಪುರುಷರು	ಸ್ತ್ರೀ	ಒಟ್ಟು
೧) ಸಚಿವರು ...	೩	...	೩
೨) ವಿಶೇಷ ಆಹ್ವಾನಿತ ಪ್ರತಿನಿಧಿಗಳು	೨	೧	೩
೩) ಕಲಾವಿದರು			
ಲಘು ಸಂಗೀತ ಕಲಾವಿದರು ...	೧	೧	೨
ಕ್ಲಾರಿಯೋನೇಟ್ ವಾದ್ಯ ಸಂಗೀತ	೧	...	೧
ತಬಲ ಕಲಾವಿದರು ...	೧	...	೧
ಪಿಟೀಲು ...	೧	...	೧
ಸಿತಾರ್ ...	೧	...	೧
ಭರತನಾಟ್ಯ ನೃತ್ಯ ...	೧	೨	೩
ನಾಟಕ ತಂಡ ...	೮	...	೮
ಯಕ್ಷಗಾನ ಕಲಾವಿದರು ...	೮	...	೮
೪) ಅಧಿಕಾರಿಗಳು ...	೪	...	೪
ಒಟ್ಟು	೩೧	೪	೩೫

ಡ) ಸಮ್ಮೇಳನದಲ್ಲಿ ಭಾಗವಹಿಸಿದ ಎಲ್ಲರಿಗೂ ತಗಲಿದ ವೆಚ್ಚ

೧) ಮಂತ್ರಿಗಳ ಪ್ರವಾಸ ವೆಚ್ಚ ಲಾಡ್ಜಿಂಗ್, ಬೋರ್ಡಿಂಗ್, ವೆಚ್ಚದ ಬಗ್ಗೆ ಇನ್ನೂ ಬಿಲ್ಲು ಬಂದಿರುವುದಿಲ್ಲ.

೨) ಕಲಾವಿದರು ಹಾಗೂ ವಿಶೇಷ ಆಹ್ವಾನಿತರು ... ರೂ. ೫,೧೫,೮೭೬-೦೦

೩) ಅಧಿಕಾರಿಗಳ ಪ್ರವಾಸ ವೆಚ್ಚ ... ರೂ. ೨,೬೩,೧೦೭-೦೦

1988–89ನೇ ಸಾಲಿನ ಆಯವ್ಯಯದಲ್ಲಿ ಎನ್ ಆರ್ ಇ ಪಿ, ಐ ಆರ್ ಡಿ ಪಿ ಮತ್ತು ಆರ್ ಎನ್ ಇ ಜಿ ಪಿ ಯೋಜನೆಗಳಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಯವ್ಯಯದ ಬಗ್ಗೆ

೨೯೬. ಶ್ರೀ ಆರ್. ವೆಂಕಟರಾವಪ್ಪ (ಮಂಚಿಬಾಗಿಲು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೮-೮೯, ೧೯೮೯-೯೦ ಮತ್ತು ೧೯೯೦-೯೧ನೇ ಸಾಲಿನ ಆಯವ್ಯಯದಲ್ಲಿ ಎನ್ಆರ್ಇಪಿ, ಐಆರ್ಡಿಪಿ ಮತ್ತು ಆರ್ಎಲ್ಇಜಿಪಿ ಯೋಜನೆಗಳಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು?

ಆ) ೧೯೮೮-೯೧ನೇ ಸಾಲಿನ ಐಆರ್ಡಿಪಿ ಅನುದಾನದಲ್ಲಿ ಗಮನಾರ್ಹ ಕಡಿತವಾಗಿದೆಯೇ?

ಇ) ಹಾಗಾದರೆ ರಾಜ್ಯ ಸರ್ಕಾರವು ಈ ಬಗ್ಗೆ ಅನುದಾನವನ್ನು ಕಡಿತಗೊಳಿಸುವ ಬದಲು ಹೆಚ್ಚಿಸಲು ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸುವುದೇ?